ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ದ್ವಿಪ್ರಶಾ/ಟೈರೈಖ/2017-18

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರ,
ಬೆಂಗಳೂರು-560012
ದಿನಾಂಕ: 14-09-2017.

## ದರಪಟ್ಟಿ ಆಹ್ವಾನ ಪ್ರಕಟಣೆ

**ವಿಷಯ:** ಎಲೆಕ್ಟ್ರಾನಿಕ್-ಟೈಪ್‌ರೈಟರ್‌ಗಳನ್ನು ಸರಬರಾಜು ಮಾಡಲು ಸಂಸ್ಥೆ/ಸರಬರಾಜುದಾರರಿಂದ ದರಪಟ್ಟಿ ಸಲ್ಲಿಸುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿಯ ಪರೀಕ್ಷಾ ವಿಭಾಗದ ದ್ವಿಪ್ರತಿ ಅಂಕಪಟ್ಟಿ ಶಾಖೆಗೆ ಎರಡು ಎಲೆಕ್ಟ್ರಾನಿಕ್-ಟೈಪ್‌ರೈಟರ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಸದರಿ ಉಪಕರಣಗಳು "display & memory with auto-correction facility and ink jet printer like impression" ಈ ನಿರ್ದಿಷ್ಟತೆಗಳ ಎರಡು ಎಲೆಕ್ಟ್ರಾನಿಕ್-ಟೈಪ್‌ರೈಟರ್‌ಗಳನ್ನು ಸರಬರಾಜು ಮಾಡಲು ಶಕ್ತ ಸಂಸ್ಥೆಗಳಿಂದ/ಸರಬರಾಜುದಾರರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಅನುಭವವಿರುವ ಮತ್ತು ಸರ್ಕಾರಿದಿಂದ ನೋಂದಣಿ ಅನುಮೋದಿಸಿಕೊಂಡಿರುವ ಸಂಸ್ಥೆಗಳಿಂದ/ಸರಬರಾಜುದಾರರಿಂದ ಮೊಹರಾದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ಮೊಹರಾದ ದರಪಟ್ಟಿಗಳನ್ನು '**ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಂಗಳೂರು-12.** ಇವರ ವಿಳಾಸಕ್ಕೆ ದಿನಾಂಕ:23-09-2017 ಮಧ್ಯಾಹ್ನ 03:00 ಗಂಟೆಯೊಳಗಾಗಿ ಸಲ್ಲಿಸುವುದು. ಸ್ವೀಕೃತವಾದ ದರಪಟ್ಟಿಗಳನ್ನು ಅದೇ ದಿನ ಮಧ್ಯಾಹ್ನ 03:30 ಗಂಟೆಗೆ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

**ಷರತ್ತುಗಳು:**

1. ಮೊಹರಾದ ದರಪಟ್ಟಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಮತ್ತು ಅಪೂರ್ಣವಾಗಿ ಸ್ವೀಕೃತವಾದ ದರಪಟ್ಟಿಗಳನ್ನು ಕಾರಣ ನೀಡದೆ ತಿರಸ್ಕರಿಸಲಾಗುವುದು.
2. ದರಪಟ್ಟಿಯನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಇಲಾಖಾ ನಿರ್ದೇಶಕರಿಗಿರುತ್ತದೆ.
3. ದರಪಟ್ಟಿಯನ್ನು ಒಪ್ಪಿ ಆದೇಶದ ದಿನದಿಂದ 06 ದಿನಗಳೊಳಗಾಗಿ ಸದರಿ ಎರಡು ಎಲೆಕ್ಟ್ರಾನಿಕ್-ಟೈಪ್‌ರೈಟರ್‌ಗಳನ್ನು ಸರಬರಾಜು ಮಾಡಿ ಹಾಗೂ ಹಣ ಪಾವತಿಗಾಗಿ ಬಿಲ್ಲನ್ನು ಈ ಕಛೇರಿಗೆ ಸಲ್ಲಿಸುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ನಿರ್ದೇಶಕರ ಆಪ್ತ ಶಾಖೆಗೆ.
2. ಜಂಟಿ ನಿರ್ದೇಶಕರು(ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಆಪ್ತ ಶಾಖೆಗೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಇವರಿಗೆ-ಇಲಾಖಾ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
4. ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ-ಇವರಿಗೆ ಮಾಹಿತಿಗಾಗಿ.
5. ಕಚೇರಿಯ ಸೂಚನಾಫಲಕ್ಕೆ.
6. ಕಚೇರಿ ಪ್ರತಿ.